ಯೋಚನೆಗಳೆಲ್ಲವನ್ನೂ ಪಕ್ಕಕ್ಕೆ ಸರಿಸುವ ಪ್ರಯತ್ನವನ್ನು ಮಾಡಿದಳು ಋತು.

ಗೆಳತಿಯರು ಸ್ನಾನ ತಿಂಡಿ ಮುಗಿಸಿ ಹರಿಕೃಷ್ಣರೊಂದಿಗೆ ಯೋಗ ಶಾಲೆಗೆ ಹೊರಟರು.

ಈ ದಿನ ಮೋಡ ಕವಿದ ವಾತಾವರಣವಿದ್ದುದರಿಂದ ಬಿಸಿಲಿನ ಝಳವಿರಲಿಲ್ಲ. ಮಾವಿನ ತೋಪಿನ ಪಕ್ಕದಲ್ಲಿದ್ದ ರಸ್ತೆಯಲ್ಲೇ ನಡೆಯತೊಡಗಿದರು. ಅಲ್ಲಿ ಮನೆಗಳು, ಹೊಲಗಳು ವಿರಳವಾಗಿ ಹರಡಿಕೊಂಡಿದ್ದವು. ಕಣ್ಣು ಹಾಯಿಸುವಷ್ಟು ದೂರ ಪುಟ್ಟ ಪುಟ್ಟ ಕಲ್ಲಿನ ಗುಡ್ಡಗಳಿದ್ದವು. ಅದಕ್ಕೂ ಆಚೆ ನಂದಿಬೆಟ್ಟ ಭವ್ಯವಾಗಿ ತಲೆಯೆತ್ತಿ ನಿಂತಿತ್ತು. ಮಾವಿನತೋಪನ್ನು ದಾಟಿ ಎಡಕ್ಕೆ ತಿರುಗಿ ಸ್ವಲ್ಪ ದೂರ ಕ್ರಮಿಸುವಾಗಲೇ ಯೋಗ ಶಾಲೆಯ ಭವ್ಯವಾದ ಕಟ್ಟಡ ಕಣ್ಣಿಗೆ ಬಿತ್ತು. ಅದನ್ನು ನೋಡಿ ಋತು ಆಶ್ಚರ್ಯದಿಂದ ಕಣ್ಣರಳಿಸಿದಳು.

ಯೋಗ ಶಾಲೆಯ ಕಟ್ಟಡ ಸಾಕಷ್ಟು ಎತ್ತರವಾಗಿ ಪಿರಮಿಡ್ ಆಕಾರದಲ್ಲಿತ್ತು. ಪಕ್ಕದಲ್ಲೇ ಹಳ್ಳಿಯ ಹೆಂಚಿನ ಮನೆಯನ್ನು ನೆನಪಿಸುವಂತಹ ಆಯುರ್ವೇದ ಚಿಕಿತ್ಸಾಲಯವೂ ಕಣ್ಣಿಗೆ ಬಿತ್ತು. ಹಸಿರು ಲಾನ್ ಹೊಂದಿರುವ ಸುಂದರವಾದ ಉದ್ಯಾನವನ ಎಲ್ಲವನ್ನೂ ಸುತ್ತುವರಿದಿತ್ತು. ಎಲ್ಲಿ ನೋಡಿದರೂ ಪ್ರಶಾಂತತೆ....ಅಚ್ಚುಕಟ್ಟುತನ. ಋತು ಅಲ್ಲಿನ ಪರಿಸರಕ್ಕೆ ಮಾರು ಹೋದಳು.

'ಋತು, ಈ ಯೋಗಶಾಲೆ, ಆಯುರ್ವೇದ ಚಿಕಿತ್ಸಾಲಯ....ಇವೆಲ್ಲಾ ನನ್ನ ಕನಸಿನ ಕೂಸುಗಳು, ಎಷ್ಟೋ ವರ್ಷಗಳ ಸತತ ಪರಿಶ್ರಮದ ಮೂಲಕವೇ ಇದೀಗ ಸಾಕಾರವಾಗಿದೆ..' ತಮ್ಮ ಹೆಮ್ಮೆಯ ಕಟ್ಟಡದ ಮುಂದೆ ನಿಂತು ಹರಿಕೃಷ್ಣರು ಮಾತನಾಡಿದಾಗ ಅವರ ಕಂಗಳಲ್ಲಿ ಆನಂದಭಾಷ್ಪದ ಒರತೆಯಿತ್ತು. ಒಂದಷ್ಟು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಆ ಪರಿಸರದಲ್ಲಿ ಓಡಾಡಿಕೊಂಡಿದ್ದರು. ಚಿಕಿತ್ಸೆಗೆಂದು ಬಂದ ಕೆಲ ಗ್ರಾಮಸ್ಥರೂ ಉದ್ಯಾನವನದಲ್ಲಿ ಕುಳಿತು ದಣಿವಾರಿಸಿಕೊಳ್ಳುತ್ತಿದ್ದರು.

ಯೋಗ ಶಾಲೆಯ ತರಗತಿಗಳು ನಡೆದುಕೊಂಡಿದ್ದವು. ಬಹಳಷ್ಟು ವಿದ್ಯಾರ್ಥಿ ವಿದ್ಯಾರ್ತಿನಿಯರು ಅಭ್ಯಾಸದಲ್ಲಿ ತಲ್ಲೀನರಾಗಿದ್ದರು. ಅಲ್ಲಿನ ಗುರುಗಳನ್ನು ನೋಡಿಕೊಂಡು ಹಾಗೆಯೇ ಆಯುರ್ವೇದ ಚಿಕಿತ್ಸಾ ಕೇಂದ್ರಕ್ಕೂ ಭೇಟಿ ನೀಡಿ ಗೆಳತಿಯರು ಹರಿಕೃಷ್ಣರಿಂದ ಬೀಳ್ಕೊಂಡರು.

'ನೋಡಿದ್ಯಾ ಋತು, ಈ ಯೋಗ, ಆಯುರ್ವೇದ ಇವೆಲ್ಲಾ ನಮ್ಮ ಸನಾತನ ಭಾರತದ ಒಂದು ಮುಖ್ಯವಾದ ಭಾಗವೇ ಆಗಿದ್ವು, ಪರಕೀಯರ ದಬ್ಬಾಳಿಕೆಗೆ ತನ್ನ ತನವನ್ನೆಲ್ಲಾ ಮರೆತಂತಿದ್ದ ಭಾರತ ಈಗ ಮತ್ತೆ ಚೇತರಿಸಿಕೊಳ್ತಿದೆ....ಅಪ್ಪಾಜಿ ಹೇಳಿದಂತೆ ನಮ್ಮ ನೈತಿಕತೆ ಹಳ್ಳ ಹಿಡಿದಿರಬಹುದು, ಆದ್ರೆ ಈ ಯೋಗವನ್ನು ಜೀವನ ಶೈಲಿಯಲ್ಲಿ ಅಳವಡಿಸಿಕೊಂಡ್ರೆ ಖಂಡಿತವಾಗಿಯೂ ನಾವು ಬದಲಾಗ್ಬಹುದು ಋತು'

ರಮ್ಯಾಳೆಂದಾಗ ಋತು ತಲೆದೂಗಿದಳು.

ಈ ದಿನ ಮೋಡ ಕವಿದ ವಾತಾವರಣವಿದ್ದುರಿಂದ ಇಬ್ಬರಿಗೂ ದಣಿವಾಗಲಿಲ್ಲ. ಮತ್ತೆ ಬಂದ ಹಾದಿಯಲ್ಲೇ ಹಿಂದಿರುಗಿ ಬಲಭಾಗದ ರಸ್ತೆಯಲ್ಲಿ ಸ್ವಲ್ಪ ದೂರ ನಡೆಯುವಾಗಲೇ ಅಂಗಡಿ ಮುಂಗಟ್ಟುಗಳು ಕಂಡು ಬರತೊಡಗಿದವು. ನಂದಿ ದೇವಾಲಯದ ಭವ್ಯವಾದ ಗೋಪುರ ಕಣ್ಣಿಗೆ ಬಿತ್ತು.

ದೇವಸ್ಥಾನದ ಆವರಣವನ್ನು ಪ್ರವೇಶಿಸಿದರು. ಆವರಣ ವಿಶಾಲವಾಗಿತ್ತು. ಸಾಲು ಮರಗಳು ತಲೆದೂಗಿಕೊಂಡಿದ್ದರೆ ಹಸಿರು ಹುಲ್ಲು ಬಂದವರಿಗೆ ಸ್ವಾಗತ ಕೋರಿತು. ಮಹಾದ್ವಾರವನ್ನು ಪ್ರವೇಶಿಸಿ ಮುನ್ನಡೆದಂತೆ ದೇವಾಲಯದ ವಿಶಾಲವಾದ ಮುಖ ಮಂಟಪವು ಸ್ವಾಗತಿಸಿತು. ಆ ಮುಖ ಮಂಟಪದ ಕಂಬಗಳು ಚಿತ್ತಾಕರ್ಷಕವಾಗಿ ಕಂಡವು. ಎದುರಿಗೆ ಕಂಡ ಬೃಹತ್ ದೇವಾಲಯವನ್ನು ನೋಡಿ ಋತು ಕಣ್ಣರಳಿಸಿದಳು. ಈ ಗ್ರಾಮದಲ್ಲಿ ಇಂಥದೊಂದು ಚೆಲುವಿನ ದೇವಾಲಯವೇ?....ಆಶ್ಚರ್ಯವೆನಿಸಿತು. ಆ ದೇವಾಲಯ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ನೆನಪಿಗೆ ತಂದಿತ್ತು.

'ಋತು, ಇದೇ ನಮ್ಮೂರಿನ ಭೋಗ ನಂದೀಶ್ವರ ಹಾಗೂ ಅರುಣಾಚಲೇಶ್ವರ ಜೋಡಿ ದೇವಸ್ಥಾನ ಕಣೆ, ಎರಡು ದೇವಸ್ಥಾನಗಳನ್ನು ಉಮಾ ಮಹೇಶ್ವರನ ಗುಡಿಯೊಂದು ಸೇರಿಸಿದೆ. ಮೊದಲ ದೇವಾಲಯವನ್ನು 8ನೇ ಶತಮಾನದಲ್ಲಿ ಕಟ್ಟಿದರೆ ಮತ್ತೊಂದು ಶತಮಾನದ ನಂತರ ಕಟ್ಟಿದ್ದಂತೆ. ಚೋಳ, ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಂದಿ ಬೆಟ್ಟದ ಮೇಲೆ ಇದೇ ರೀತಿಯ ಯೋಗ ನಂದೀಶ್ವರ ದೇವಸ್ಥಾನ ಇದೆ. ಇದಕ್ಕೆ ಪೌರಾಣಿಕ ಹಿನ್ನೆಲೆಯೂ ಇದೆ ಋತು. ಹಿಂದೆ ಕೂಷ್ಮಾಂಡನೆಂಬ ಒಬ್ಬ ಶಿವಗಣನು ಗಣಗಳಿಗೆ ಅಧಿಪತಿಯಾಗಬೇಕೆಂಬ ಇಚ್ಛೆಯಿಂದ ಪಂಚಗಿರಿಗಳಿಂದ ಆವೃತವಾಗಿರುವ ಈ ಉನ್ನತ ಜಾಗದಲ್ಲಿ ವಿಷ್ಣುವಿನ ಕುರಿತಾಗಿ ತಪಸ್ಸು ಮಾಡಿದ್ನಂತೆ. ಹಾಗಾಗಿ ಇದನ್ನು ಕೂಷ್ಮಾಂಡಗಿರಿ ಅಂತ್ಲೂ ಕರೆದ್ರಂತೆ. ಇಲ್ಲಿಗೆ ನಂದಿಗಿರಿ ಎಂದು ಹೆಸರು ಬರಲು ಮತ್ತೊಂದು ಪೌರಾಣಿಕ ಕಥೆಯೂ ಇದೆ. ಶಿವನ ಪ್ರೀತಿಯ ಕಿಂಕರನಾದ ನಂದಿಯು ಇದೇ ಜಾಗದಲ್ಲಿ ತನ್ನದೊಂದು ಪಾಪ ಪರಿಹಾರಕ್ಕೆ ತಪಸ್ಸು ಮಾಡಿದ್ದರಿಂದ ಇದು ನಂದಿಗಿರಿಯಾಯಿತಂತೆ. ಅಪ್ಪಾಜಿ ಆಗಾಗ ಇವನ್ನೆಲ್ಲಾ ಹೇಳ್ತಿರ್ತಾರೆ....ನಮ್ಮ ನಾಡಿನ ಹೆಮ್ಮೆಯ ಇಂಜಿನಿಯರಾದ ಸರ್ ಎಂ.ವಿಶ್ವೇಶ್ವರಯ್ಯನವರ ಹುಟ್ಟೂರಾದ ಮುದ್ದೇನಹಳ್ಳಿಯೂ ಇಲ್ಲಿಂದ ತುಂಬಾ ಹತ್ರ ಇದೆ....ಸಾಧ್ಯವಾದ್ರೆ ನಂದಿ ಬೆಟ್ಟಕ್ಕೆ, ಮುದ್ದೇನಹಳ್ಳಿಗೆ ಹೋಗ್ಬರೋಣ...'

ರಮ್ಯಾಳ ಮಾತುಗಳನ್ನು ಆಲಿಸುತ್ತಾ ಅಲ್ಲಿನ ಕಂಬಗಳಲ್ಲಿ, ಗೋಡೆಗಳಲ್ಲಿ ಅನಾವರಣಗೊಂಡಿರುವ ಶಿಲ್ಪಕಲೆಯ ವೈಭೋಗವನ್ನು ಸವಿಯುತ್ತಾ ಋತು ಹೆಜ್ಜೆ ಹಾಕತೊಡಗಿದ್ದಳು. ಅಲ್ಲಿನ ಮದನಿಕೆಯ ಸಾಲುಗಳು, ದೇವಾಲಯದ ನವರಂಗದಲ್ಲಿ ಚಿತ್ತಾಕರ್ಷಕವಾದ ಜಾಲಂದ್ರ, ಕಲ್ಲು ಕಲೆಯಾಗಿ ಅರಳುವ ವಿಸ್ಮಯವನ್ನು ಅಚ್ಚರಿಯಿಂದ ನೋಡಿದಳು.

ದೇವಸ್ಥಾನಗಳಲ್ಲಿ ಮಹಾಮಂಗಳಾರತಿಯ ಸಮಯವಾಗಿತ್ತು. ಕಪ್ಪು ಶಿಲೆಯಲ್ಲಿ ಕಂಗೊಳಿಸುತ್ತಿದ್ದ ಲಿಂಗರೂಪಿ ಭೋಗ ನಂದೀಶ್ವರ ಹಾಗೂ ಅರುಣಾಚಲೇಶ್ವರರಿಗೆ ಕೈ ಮುಗಿದು, ನೆರೆದ ಭಕ್ತರೊಂದಿಗೆ ತಾವೂ ನಿಂತು ಋತು ,ರಮ್ಯರು ತೀರ್ಥ ಪ್ರಸಾದ ಸ್ವೀಕರಿಸಿ ಹೊರಬಂದರು.

'ಇಲ್ಲೇ ಶೃಂಗತೀರ್ಥ ಎಂದು ಕರೆಯುವ ಕಲ್ಯಾಣಿಯೊಂದಿದೆ, ಬಾ ಋತು ಅಲ್ಲಿಗೂ ಹೋಗೋಣ....' ಗೆಳತಿಯ ಕೈ ಹಿಡಿದುಕೊಂಡೇ ರಮ್ಯ ದೇವಸ್ಥಾನದ ದ್ವಾರವೊಂದನ್ನು ದಾಟಿ ಹೊರಬಂದಳು. ಅಲ್ಲಿ ಸ್ವಚ್ಛವಾದ ಕಲ್ಯಾಣಿಯೊಂದು ಕಂಡಿತು. ಕಲ್ಯಾಣಿಯ ಸುತ್ತಲೂ ಮುಖ ಮಂಟಪವಿದ್ದರೆ ಇಳಿಯಲು ಮೆಟ್ಟಿಲುಗಳಿದ್ದವು.

'ಋತು, ಇಲ್ಲಿ ಆಷಾಡ ಮಾಸದಲ್ಲಿ ದೀಪಗಳ ಜಾತ್ರೆ ನಡೆಸ್ತಾರೆ, ಆಗ ವಿಶೇಷ ಪೂಜೆಗಳೂ ನಡೆಯುತ್ತೆ, ರಾಜ್ಯದ ವಿವಿಧ ಕಡೆಯಿಂದ ಭಕ್ತರು ಬಂದು ಸೇರ್ತಾರೆ. ನಂಗಂತೂ ಚಿಕ್ಕ ವಯಸ್ಸಿನಲ್ಲಿ ನಂದಿಯ ಜಾತ್ರೆ ಅಂದ್ರೆ ಎಷ್ಟು ಇಷ್ಟವಿತ್ತು ಗೊತ್ತಾ?....ಅಷ್ಟೇ ಅಲ್ಲ ಋತು....ಇಲ್ಲಿಂದ ಸ್ವಲ್ಪ ದೂರದಲ್ಲಿ ಕಣಿವೆ ಬಸವನ ದೇವಸ್ಥಾನವಿದೆ. ಅಲ್ಲಿ ದೊಡ್ಡದಾದ ಬಸವನ ಕಲ್ಲಿನ ಕೆತ್ತನೆ ಇದೆ. ಆ ಬಸವ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ ಅಂತ ಹೇಳ್ತಾರೆ....ಪ್ರಳಯಕಾಲದಲ್ಲಿ ಆ ಬಸವ ಮೇಲೆದ್ದು ಗುಟುರು ಹಾಕುತ್ತೆ ಅಂಥಾರೆ. ಇವೆಲ್ಲಾ ನಿಜವೋ ಅಥವಾ ನಂಬಿಕೆಯೋ ಯಾರಿಗ್ಗೊತ್ತು, ಜೀವನ ಅಂದ್ರೆ ನಂಬಿಕೆ ಅಲ್ವಾ ಋತು?'

ರಮ್ಯ ಮಾತನಾಡುತ್ತಿದ್ದರೆ ತನ್ಮಯಳಾಗಿ ಅವಳ ಮಾತಿನತ್ತ ಗಮನ ಕೊಟ್ಟಿದ್ದ ಋತುವಿನ ದೃಷ್ಟಿ ಆಕಸ್ಮಿಕವಾಗಿ ಕಲ್ಯಾಣಿಯಾಚೆಯ ಮುಖ ಮಂಟಪದತ್ತ ನೆಟ್ಟಿತು. ಅಲ್ಲಿ ಕಂಡ ವ್ಯಕ್ತಿಯನ್ನು ನೋಡಿ ಅವಳು ಕಂಪಿಸಿದಳು....!

ಕಲ್ಯಾಣಿಯಾಚೆಯ ಮುಖ ಮಂಟಪದಲ್ಲಿ ನಿನ್ನೆ ರಾತ್ರಿ ಮಸುಕು ಬೆಳಕಿನಲ್ಲಿ ಕಂಡಿದ್ದ ಅದೇ ಸನ್ಯಾಸಿ ಕುಳಿತುಕೊಂಡು ಅವರತ್ತಲೇ ನೋಡುತ್ತಿದ್ದ. ಗೇಣುದ್ದದ ಕಪ್ಪು ಗಡ್ಡ....ಕೇಸರಿ ಬಣ್ಣದ ಪಂಚೆಯುಟ್ಟು ವಿಭೂತಿಯನ್ನು ಢಾಳಾಗಿ ಹಣೆಗೆ

**ಮಮ್ಮಿ ಡ್ಯಾಡಿ**

ಪಾಪ, ಅವನು
ಅಪ್ಪ, ಅಮ್ಮ ಇಲ್ಲದ
ಅನಾಥ;
ಮಮ್ಮಿ ಡ್ಯಾಡಿ
ಮಾತ್ರ ಇದ್ದಾರೆ!

★ ಬಾಲು ಪಟಗಾರ

